ಸದನದ ಕಲಾಪವು ಮಧ್ಯಾಹ್ನ 12.06ಕ್ಕೆ ಪ್ರಾರಂಭವಾಯಿತು.

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

(ವಂದೇ ಮಾತರಂ ಗೀತೆಯೊಂದಿಗೆ ಸದನದ ಕಲಾಪಗಳು ಪ್ರಾರಂಭವಾದವು)

ಅಧ್ಯಕ್ಷರು : ಈಗ ಹುಟ್ಟುಹಬ್ಬದ ಶುಭಾಷಯಗಳು. ಈ ದಿನ ಅಂದರೆ ದಿನಾಂಕ : 23–06–2014 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾದ ಶ್ರೀ ಕೆ.ಗೋಪಾಲಯ್ಯ ಹಾಗೂ ಡಾ: ವಿಶ್ವನಾಥ್ ಈರಣ್ಣಗೌಡ ಪಾಟೀಲ್ ಇವರುಗಳಿಗೆ ಜನ್ಮ ದಿನದ ಶುಭಾಷಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಆಡಳಿತ ಪಕ್ಷದವರ ಉಪಸ್ಥಿತಿ ಕಾಣುತ್ತಿಲ್ಲ. ಅವರ ಶಾಸಕಾಂಗ ಪಕ್ಷದ ಸಭೆ ಇರಬಹುದು. ಆದರೆ ಸದನ ಪ್ರಾರಂಭವಾಗುವ ಮೊದಲನೆ ದಿನವೇ ಮಾನ್ಯ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಉಳಿದ ಸಚಿವರು, ಶಾಸಕರಾಗಲಿ, ಶಾಸಕಾಂಗ ಪಕ್ಷದ ಸಭೆಯನ್ನು ಬೇಗ ಮುಗಿಸಿ ಕಾಲಕ್ಕೆ ಸರಿಯಾಗಿ ಸದನಕ್ಕೆ ಬರಬೇಕಾಗಿರುವುದು ಈ ಸದನಕ್ಕೆ ತೋರುವ ಗೌರವ. ಮೊದಲ ದಿನವೇ ಈ ರೀತಿ ಆಗುವುದು ಈ ಸದನಕ್ಕೆ ಗೌರವ ತರುವುದಿಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ನಾನು ಖಂಡಿತ ಒಪ್ಪುತ್ತೇನೆ. ಈ ವಿಚಾರವನ್ನು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ : ಎಲ್ಲರನ್ನು ನೇಪಾಳಕ್ಕೆ ಕರೆದುಕೊಂಡು ಹೋಗಿ ಟ್ರೈನಿಂಗ್ ಕೊಟ್ಟು ಕರೆದುಕೊಂಡು ಬಂದಿದ್ದರೆ ಸರಿಯಾಗಿರುವುದು. ಜೆಡಿ(ಎಸ್)ನವರು ಶ್ರೀಲಂಕಾಗೆ ಹೋಗಿ ಬಂದ ಮೇಲೆ ಕೋರಂ ಚೆನ್ನಾಗಿ ಇದೆ. ಅವರು ಶ್ರೀಲಂಕಾಗೆ ಹೋಗುವುದಕ್ಕಾಗುವುದಿಲ್ಲ, ನೇಪಾಳಕ್ಕೆ ಕರೆದುಕೊಂಡು ಹೋಗಿ ಬಂದಿದ್ದರೆ ಸರಿಯಾಗುತ್ತಿತ್ತು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಸಿಎಲ್‌ಪಿ ಮೀಟಿಂಗ್ ಮುಗಿದಿದೆ, ಈಗ ಅವರು ಬರುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಸಿಎಲ್‌ಪಿ ಮೀಟಿಂಗ್ ಇದೆ ಎನ್ನುವುದನ್ನು ಒಪ್ಪಿದ್ದೇವೆ. ಆ ಸಿಎಲ್‌ಪಿಯನ್ನು ಬೇಗ ಮುಗಿಸಿಕೊಂಡು ಅಧಿವೇಶನ ಪ್ರಾರಂಭವಾಗುವ ಮೊದಲನೆ ದಿನ ಈ ರೀತಿ ವಿಳಂಬವಾದರೆ ಹೇಗೆ ?

ಅಧ್ಯಕ್ಷರು : ಇದರ ಬಗ್ಗೆ ಬಹಳ ಚರ್ಚೆ ಬೇಡ, ಸಾಕು. ತಮ್ಮ ಸಲಹೆ ಸೂಕ್ತವಾಗಿದೆ, ಎಲ್ಲರೂ ಅದನ್ನು ಗಮನದಲ್ಲಿಟ್ಟುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವು ವಿನಂತಿ ಮಾಡಬಾರದು, ಆದೇಶ ಮಾಡಬೇಕಾಗುತ್ತದೆ. you have to order, not request.

ಅಧ್ಯಕ್ಷರು : ಆಯಿತು.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಮ್ಮ ರಾಯರೆಡ್ಡಿಯವರು ಎಷ್ಟು ಒಳ್ಳೆಯ ಮಾತನ್ನು ಹೇಳಿದರು, ಅವರಿಗೆ ಏನಾದರೂ ಒಂದು ಒಳ್ಳೆಯ ಅವಕಾಶ ಕೊಡಿಸಿ.

ಅಧ್ಯಕ್ಷರು : ಈಗ ಸಂತಾಪ ಸೂಚನೆ.

ಅಧ್ಯಕ್ಷರು : (ಮಾನ್ಯ ಅಧ್ಯಕ್ಷರು ಮಂಡಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದ ನಂತರ ಈ ಸದನದ ಮತ್ತು ಮೇಲ್ಮನೆಯ ಸದಸ್ಯರಾಗಿದ್ದಂಥ ಅನೇಕ ಜನ ಮಾನ್ಯ ಸದಸ್ಯರು ದಿವಂಗತರಾಗಿದ್ದಾರೆ. ಅವರ ಜ್ಞಾಪಕಾರ್ಥವಾಗಿ, ಅವರನ್ನು ಸ್ಮರಣೆ ಮಾಡಿಕೊಳ್ಳಲಿಕ್ಕೋಸ್ಕರ, ಅವರ ಆತ್ಮಕ್ಕೆ ಶಾಂತಿ ಕೋರಲಿಕ್ಕೋಸ್ಕರವಾಗಿ ತಾವು ಈ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ. ನಾನು ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತೇನೆ.

ಮೊದಲನೆಯದಾಗಿ, ಎಸ್.ಮಲ್ಲಿಕಾರ್ಜುನಯ್ಯನವರು. ಇವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಜನಿಸಿದಂಥವರು. ಇವರು ಬಹಳ ದೀರ್ಘಕಾಲ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಿದಂಥ ಒಬ್ಬ ನಾಯಕರು. ಇವರು ಮೂರು ಬಾರಿ ವಿಧಾನ ಪರಿಷತ್ತಿಗೆ ಮತ್ತು ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. ಮಲ್ಲಿಕಾರ್ಜುನಯ್ಯನವರು ತುರ್ತು ಪರಿಸ್ಥಿತಿಯನ್ನು ವಿರೋಧ ಮಾಡಿ ಸುಮಾರು ಹದಿನೆಂಟು ತಿಂಗಳ ಕಾಲ ಜೈಲುವಾಸವನ್ನು ಕೂಡ ಅನುಭವಿಸಿದ್ದರು. ಇವರು ಬೆಂಗಳೂರು ಜೈಲಿನಲ್ಲಿದ್ದರು. ಅವರು ಬಹಳ ಸಜ್ಜನರು. ವೃತ್ತಿಯಲ್ಲಿ ವಕೀಲಾಗಿದ್ದರು, ಕೃಷಿಕರಾಗಿದ್ದರು. ಬಹಳ ಸರಳ ಮತ್ತು ಸಜ್ಜನಿಕೆಯ ಒಬ್ಬ ರಾಜಕಾರಣಿಯಾಗಿದ್ದಂಥವರನ್ನು ಇವರತ್ತು ನಾವೆಲ್ಲರೂ ಕೂಡ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅಂಥ ಸಜ್ಜನರ ರಾಜಕಾರಣಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಸಾವಿಗೆ ನಾನು ಸಂತಾಪವನ್ನು ವ್ಯಕ್ತ ಮಾಡಿ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.